ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.
ಸಿಸಿ ನಂಬರ್.1294/2023

| | | | |
|---|---|---|---|
| ಸಾಕ್ಷಿಯ ಹೆಸರು | : ನಾಗರಾಜ | ಸಿ.ಡಬ್ಲ್ಯು | 2 |
| ತಂದೆಯ ಹೆಸರು | : ಪಾಲಯ್ಯ | ಪಿ.ಡಬ್ಲ್ಯು | 2 |
| ವಯಸ್ಸು | : 52 ವರ್ಷ | | |
| ಉದ್ಯೋಗ | : ಕೂಲಿ ಕೆಲಸ | | |
| ವಾಸ ಸ್ಥಳ | : ಜಾಲಿವಾಂಕ, ಆಂಧ್ರ ಪ್ರದೇಶ | | |

ದಿನಾಂಕಃ20.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ದಿನಾಂಕ 14.06.02023 ರಂದು ಎಚ್ಚೈರ್ ಲಾರಿ ನಂ.ಕೆ.ಎ.16-ಡಿ 5417 ರಲ್ಲಿ ಬೆಳಗ್ಗೆ 11.30 ಗಂಟೆಯ ಸುಮಾರಿಗೆ ಗೊಬ್ಬರವನ್ನು ಅನ್ಲೋಡ್ ಮಾಡಲು ತರೀಕೆರೆಗೆ ಬಂದಿದ್ದೆವು. ತೋಟದಲ್ಲಿ ರಸ್ತೆ ಚೆನ್ನಾಗಿಲ್ಲದ ಕಾರಣ ಏಕಾಏಕಿ ಲಾರಿಯ ಹಿಂದಿನ ಬಾಗಿಲು ತೆಗೆದುಕೊಂಡು ವಾಹನವು ಹಿಂಬಂದಿಗೆ ಚಲಿಸಿತು. ಲಾರಿಯ ಹಿಂದೆ ಚಿತ್ತಣ್ಣ ಎಂಬ ವ್ಯಕ್ತಿ ನಿಂತಿದ್ದ. ಆತನು ನನ್ನ ಗೆಳೆಯ ಇರುತ್ತಾನೆ. ಲಾರಿ ಆತನಿಗೆ ಬಡಿದು ಚಿತ್ತಣನು ಕಲ್ಲಿನ ಮೇಲೆ ಬಿದ್ದು ತಲೆಗೆ ಗಾಯವಾಗಿ ಮರಣ ಹೊಂದಿದನು. ಲಾರಿ ಚಾಲಕನ ತಪ್ಪಿನಿಂದ ಅಪಘಾತವು ಆಗಿದೆ ಎಂದು ಗೊತ್ತಾಯಿತು. ನನಗೆ ಸದರಿ ವಿಷಯವನ್ನು ಸ್ಥಳದಲ್ಲಿ ಇದ್ದ ಚಾಸ-1 ರವರು ದೂರವಾಣಿ ಕರೆ ಮಾಡಿ ತಿಳಿಸಿದ್ದಾರೆ. ಪೋಲೀಸರು ವಿಚಾರಣೆ ಮಾಡಿದ್ದಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ಘಟನೆ ನಡೆಯಬೇಕಾದರೆ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ನನಗೆ ಅಪಘಾತದ ಬಗ್ಗೆ ವೈಯುಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ. ಯಾರ ತಪ್ಪಿನಿಂದ ಅಪಘಾತ ಆಗಿದೆ ಎಂಬ ಬಗ್ಗೆ ಕೂಡ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಘಟನಾ ಸ್ಥಳದ ಚಕ್ಕು ಬಂಧಿಯನ್ನು ಹೇಳಲು ಬರುವುದಿಲ್ಲ. ಬೇರೆಯವರು ಹೇಳಿದ ಮಾಹಿತಿಯ ಮೇಲೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.